## ಗುರಿ

- ದೇಶದ 51 ಕೋಟಿ ಜಾನುವಾರುಗಳಿಗೆ ಕಾಲುಬಾಯಿ ರೋಗದ ವಿರುದ್ಧ ವರ್ಷಕ್ಕೆ ಎರಡು ಬಾರಿ ಲಸಿಕೆ ನೀಡುವುದು. (ರೋಗಕ್ಕೆ ತುತ್ತಾಗಬಹುದಾದ ಶೇ. 100ರಷ್ಟು ಹಸು, ಎಮ್ಮೆ, ಕುರಿ, ಮೇಕೆ ಮತ್ತು ಹಂದಿಗಳಿಗೆ)
- 3.6 ಕೋಟಿ ಹೆಣ್ಣುಕರುಗಳಿಗೆ ಪ್ರತಿ ವರ್ಷ ಕಂದು ರೋಗದ ಲಸಿಕೆ ನೀಡುವುದು. (ರೋಗಕ್ಕೆ ತುತ್ತಾಗಬಹುದಾದ ಶೇ. 100ರಷ್ಟು 4 ರಿಂದ 8 ತಿಂಗಳ ಹೆಣ್ಣು ಕರುಗಳಿಗೆ)





सत्यमेव जयते

**ಭಾರತ ಸರ್ಕಾರ**
**ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ**

**ಪಶು ಸಂಗೋಪನೆ ಹಾಗೂ ಹೈನುಗಾರಿಕೆ ಇಲಾಖೆ**

## ಸಂಪರ್ಕಿಸಿ

ಲಸಿಕೆಯನ್ನು ಹಾಕಿಸಲು ನಿಮ್ಮ ಹತ್ತಿರದ ಪಶುಚಿಕಿತ್ಸಾಲಯವನ್ನು ಸಂಪರ್ಕಿಸಿ



@DeptofAHD @Dept_of_AHD

# ರಾಷ್ಟ್ರೀಯ ಜಾನುವಾರುಗಳ ರೋಗ ನಿಯಂತ್ರಣ ಕಾರ್ಯಕ್ರಮ (NADCP)



## ಲಸಿಕೆಯಿಂದ ಕಾಲು ಬಾಯಿ ರೋಗ ಮತ್ತು ಕಂದು ರೋಗಗಳ ಸಂಪೂರ್ಣ ನಿಯಂತ್ರಣ ಮತ್ತು ನಿರ್ಮೂಲನೆ

## ಆರೋಗ್ಯಯುತ ಜಾನುವಾರು ಸಂತುಷ್ಟ ರೈತ ಸ್ವಸ್ಥ ದೇಶ

ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ, ಸುತ್ತೂರು
ಪಶುಪಾಲನೆ ಮತ್ತು ಪಶುವೈದ್ಯಕೀಯ ಇಲಾಖೆ, ಮೈಸೂರು

# ರಾಷ್ಟ್ರೀಯ ಜಾನುವಾರುಗಳ ರೋಗ ನಿಯಂತ್ರಣ ಕಾರ್ಯಕ್ರಮ (NADCP)

## ಕಾಲು ಬಾಯಿ ರೋಗ

ಕಾಲು ಬಾಯಿ ರೋಗವು ವೈರಸ್‌ನಿಂದ ಹರಡುವ ತೀವ್ರ ಸಾಂಕ್ರಾಮಿಕ ರೋಗವಾಗಿದ್ದು, ಹಸು, ಎಮ್ಮೆ, ಕುರಿ, ಮೇಕೆ, ಹಂದಿ ಮತ್ತು ಇತರ ಗೊರಸು ಕಾಲಿನ ಪ್ರಾಣಿಗಳಲ್ಲಿ ಕಂಡುಬರುತ್ತದೆ.

### ರೋಗದ ಲಕ್ಷಣಗಳು

» ಜ್ವರ
» ಬಾಯಿಯಲ್ಲಿ ಹುಣ್ಣು, ಗೊರಸು ಮತ್ತು ಕೆಚ್ಚಲಿನ ತೊಟ್ಟಿನ ಮೇಲೆ ಹುಣ್ಣುಗಳು
» ಹಾಲಿನ ಇಳುವರಿ ಕುಂಠಿತವಾಗುವುದು
» ದೇಹದ ತೂಕ ಕಡಿಮೆಯಾಗುವುದು
» ಮೇವು ತಿನ್ನದಿರುವುದು
» ಕಾಲು ಕುಂಟುವುದು





## ಕಂದು ರೋಗ

ಕಂದುರೋಗ ಜಾನುವಾರುಗಳ ಸಂತಾನೋತ್ಪತ್ತಿಗೆ ಸಂಬಂಧಪಟ್ಟ ರೋಗವಾಗಿದ್ದು, ಇದು ರೈತರಿಗೆ ಅತಿಯಾದ ಆರ್ಥಿಕ ನಷ್ಟ ಉಂಟುಮಾಡುವುದಲ್ಲದೆ ಮನುಷ್ಯನ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಇದು ಪ್ರಾಣಿಗಳಿಂದ ಮನುಷ್ಯನಿಗೆ ಹರಡಬಲ್ಲದು.

### ರೋಗದ ಲಕ್ಷಣಗಳು

» ಗರ್ಭಪಾತ
» ಸತ್ತ ಕರುವಿನ ಜನನ
» ದುರ್ಬಲ ಕರುವಿನ ಜನನ
» ಕಸ ಹಾಕದಿರುವುದು
» ವೃಷಣಗಳು ದಪ್ಪವಾಗುವುದು




## ಆರ್ಥಿಕ ನಷ್ಟಗಳು

» ಕಾಲುಬಾಯಿ ಮತ್ತು ಕಂದು ರೋಗಗಳು ಜಾನುವಾರುಗಳ ಜೀವಿತಾವಧಿಯಲ್ಲಿ ಶೇ. 30-50ರಷ್ಟು ಹಾಲಿನ ಇಳುವರಿ ನಷ್ಟಕ್ಕೆ ಕಾರಣವಾಗುತ್ತವೆ.
» ಕಾಲುಬಾಯಿ ಮತ್ತು ಕಂದುರೋಗಗಳು ರೈತರಿಗೆ ವರ್ಷಕ್ಕೆ ರೂ. ಐವತ್ತು ಸಾವಿರ ಕೋಟಿಯಷ್ಟು ನಷ್ಟವನ್ನು ಉಂಟುಮಾಡುತ್ತಿವೆ.
» ಕಾಲುಬಾಯಿ ಮತ್ತು ಕಂದುರೋಗಗಳು ಜಾನುವಾರುಗಳ ಉತ್ಪನ್ನಗಳ ರಫ್ತಿನ ಮೇಲೆ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ಪ್ರತಿಷ್ಠೆಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟುಮಾಡುತ್ತವೆ.

## ರಾಷ್ಟ್ರೀಯ ಜಾನುವಾರುಗಳ ರೋಗ ನಿಯಂತ್ರಣ ಕಾರ್ಯಕ್ರಮ (NADCP)

### ಕಾರ್ಯಕ್ರಮದ ಹಿನ್ನೆಲೆ

» ಪ್ರತಿ ಆರು ತಿಂಗಳಿಗೊಮ್ಮೆ ಎಲ್ಲ ಜಾನುವಾರುಗಳಿಗೆ (ಹಸು, ಎಮ್ಮೆ, ಕುರಿ, ಮೇಕೆ ಮತ್ತು ಹಂದಿ) ತಪ್ಪದೇ ಲಸಿಕೆ ಹಾಕಿಸುವು -ದರಿಂದ ಕಾಲು ಬಾಯಿ ರೋಗವನ್ನು ತಡೆಗಟ್ಟಬಹುದು.
» ಹೆಣ್ಣು ಕರುಗಳಿಗೆ (4-8 ತಿಂಗಳು) ಜೀವಿತಾವಧಿಯಲ್ಲಿ ಒಂದು ಬಾರಿ ಲಸಿಕೆ ಹಾಕಿಸುವುದರಿಂದ ಕಂದುರೋಗವನ್ನು ತಡೆಗಟ್ಟಬಹುದು.

ರಾಷ್ಟ್ರೀಯ ಜಾನುವಾರುಗಳ ರೋಗ ನಿಯಂತ್ರಣ ಕಾರ್ಯಕ್ರಮವು ಭಾರತ ಸರ್ಕಾರದ ಹೊಸ ರೋಗ ನಿಯಂತ್ರಣ ಕಾರ್ಯಕ್ರಮವಾಗಿದ್ದು, ಕೇಂದ್ರ ಸರ್ಕಾರವು ಶೇ. 100 ರಷ್ಟು ಅನುದಾನವನ್ನು, ಅಂದರೆ ರೂ. 13,343 ಕೋಟಿಗಳನ್ನು, ರಾಜ್ಯ ಸರ್ಕಾರಗಳಿಗೆ ಮುಂದಿನ 5 ವರ್ಷಗಳವರೆಗೆ (2019 ರಿಂದ 2024ರವರೆಗೆ) ನೀಡಲಿದೆ.



## ಕಾರ್ಯಕ್ರಮದ ಉದ್ದೇಶಗಳು

» 2025ರ ಹೊತ್ತಿಗೆ ಕಾಲುಬಾಯಿರೋಗದ ಸಂಪೂರ್ಣ ಹತೋಟಿ ಹಾಗು 2030ರ ಹೊತ್ತಿಗೆ ಸಂಪೂರ್ಣ ನಿರ್ಮೂಲನೆ
» ಹಸು ಮತ್ತು ಎಮ್ಮೆ ಕರುಗಳಲ್ಲಿ ಕಂದು ರೋಗದ ತೀವ್ರ ನಿಯಂತ್ರಣದಿಂದ, ಜಾನುವಾರು ಹಾಗು ಮನುಷ್ಯರಿಗೆ ಉಂಟಾಗುವ ರೋಗದ ಪರಿಣಾಮಕಾರಿ ನಿರ್ವಹಣೆ

## ಕಾರ್ಯಕ್ರಮದ ರೂಪುರೇಷೆಗಳು

» ದೇಶಾದ್ಯಂತ ಇರುವ ಶೇ. 100ರಷ್ಟು ಹಸು, ಎಮ್ಮೆ, ಕುರಿ, ಆಡು ಹಾಗು ಹಂದಿಗಳಿಗೆ ವರ್ಷಕ್ಕೆರಡು ಬಾರಿ ಕಾಲುಬಾಯಿ ರೋಗಕ್ಕೆ ಲಸಿಕೆ ನೀಡುವುದು
» ಕರುಗಳಿಗೆ  ಕಾಲುಬಾಯಿ ರೋಗಕ್ಕೆ ಪ್ರಾಥಮಿಕ ಲಸಿಕೆ (4-5 ತಿಂಗಳ ಕರುಗಳಿಗೆ)
» ಶೇ. 100ಷ್ಟು ಹಸು ಹಾಗು ಎಮ್ಮೆಕರುಗಳಿಗೆ (4-8 ತಿಂಗಳ ವಯಸ್ಸು) ಕಂದು ರೋಗದ ಲಸಿಕೆ ನೀಡುವುದು
» ಲಸಿಕೆಗೆ ಮುನ್ನ ಜಂತು ಹುಳು ನಿವಾರಣೆ
» ಜಾನುವಾರುಗಳ ಗುರುತಿಸುವಿಕೆಗೆ ವಿಶೇಷವಾದ ಗುರುತಿನ ಕಿವಿ ಓಲೆ ಹಾಕುವುದು ಹಾಗು ಪ್ರಾಣಿಯ ಆರೋಗ್ಯ ಪತ್ರಗಳ ವಿತರಣೆ